# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1191

ಸದಸ್ಯರ ಹೆಸರು : ಶ್ರೀ ಕೆ.ಎ ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)

ಉತ್ತರಿಸುವ ದಿನಾಂಕ : 29-12-2022

ಉತ್ತರಿಸುವವರು : ಸನ್ಮಾನ್ಯ ಮುಖ್ಯಮಂತ್ರಿಯವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಅರಣ್ಯದಲ್ಲಿ ಒಟ್ಟು ಇರುವ ಕಾಡುನಾಯಿ/ಸೀಳುನಾಯಿ/ಕೆನ್ನಾಯಿಗಳ ಸಂಖ್ಯೆ ಎಷ್ಟು ಮತ್ತು ಯಾವ ಅರಣ್ಯ ಪ್ರದೇಶದಲ್ಲಿ ಹೆಚ್ಚು ಇವೆ (ಪೂರ್ಣ ಮಾಹಿತಿ ನೀಡುವುದು) | ರಾಜ್ಯದ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಕಾಡು ನಾಯಿಗಳ ಸಂಖ್ಯೆಗಳ ಕುರಿತು ನಿರ್ದಿಷ್ಟವಾಗಿ ಗಣತಿಯನ್ನು ನಡೆಸಿರುವುದಿಲ್ಲ. ಆದರೆ ಕ್ಯಾಮರಾ ಟ್ರಾಪ್ ಬಳಸಿ ಹುಲಿ ಗಣತಿ ಕಾರ್ಯ ಕೈಗೊಳ್ಳಲಾಗಿದ್ದು, ಸದರಿ ಸಮಯದಲ್ಲಿ ನಡೆಸಲಾಗುವ ಪರಭಕ್ಷಕ ಪ್ರಾಣಿಗಳ ಸರ್ವೆಯ ಆಧಾರದನ್ವಯ ಕಾಡುನಾಯಿಗಳು ರಾಜ್ಯಾದ್ಯಂತ ಕಂಡು ಬಂದಿದ್ದು, ಮುಖ್ಯವಾಗಿ ನಾಗರಹೊಳೆ, ಬಂಡೀಪುರ, ಬಿ.ಆರ್.ಟಿ., ಭದ್ರಾ ಮತ್ತು ಕಾಳಿ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಕಂಡುಬರುತ್ತವೆ. ಅಲ್ಲದೆ ಮಲೆನಾಡು ಹಾಗೂ ಪಶ್ಚಿಮಘಟ್ಟಗಳ ಅರಣ್ಯ ಪ್ರದೇಶಗಳಲ್ಲಿಯೂ ಕಂಡುಬಂದಿರುತ್ತವೆ. ಸದರಿ ಪ್ರಭೇದದ ನಿರ್ದಿಷ್ಟ ಗಣತಿ ಕಾರ್ಯ ಕೈಗೊಳ್ಳದೇ ಇರುವುದರಿಂದ ಕಾಡುನಾಯಿಗಳ ಖಚಿತ ಸಂಖ್ಯೆಯ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ. |
| ಆ) | ರಾಜ್ಯದಲ್ಲಿ ಕಾಡುನಾಯಿ/ಸೀಳುನಾಯಿ/ ಕೆನ್ನಾಯಿ ಸಂತತಿ ಕ್ಷೀಣಿಸಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇದಕ್ಕೆ ಕಾರಣವೇನು; (ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಕಾಡುನಾಯಿ/ಸೀಳುನಾಯಿ/ಕೆನ್ನಾಯಿ ಸಂತತಿ ಪ್ರಮಾಣದಲ್ಲಿ ಕ್ಷೀಣಿಸಿರುವ ಬಗ್ಗೆ ಯಾವುದೇ ವರದಿಯಾಗಿರುವುದಿಲ್ಲ. |
| ಇ) | ರಾಜ್ಯದಲ್ಲಿರುವ ಕಾಡುನಾಯಿ/ ಸೀಳುನಾಯಿ/ ಕೆನ್ನಾಯಿಗಳ ಸಮೀಕ್ಷೆಯನ್ನು ನಡೆಸಲಾಗಿದೆಯೇ; ಈ ಸಮೀಕ್ಷೆಯನ್ನು ಕೈಗೊಂಡಿರುವ ಬಗ್ಗೆ ಹೇಗೆ ಮತ್ತು ಸಮೀಕ್ಷೆಯಿಂದ ಹೊರಬಂದಿರುವ ಮಹತ್ವದ ಅಂಶಗಳು ಯಾವುವು (ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಕಾಡುನಾಯಿ/ಸೀಳುನಾಯಿ/ಕೆನ್ನಾಯಿಗಳ ಕುರಿತು ನಿರ್ದಿಷ್ಟವಾಗಿ ಸಮೀಕ್ಷಾ ಕಾರ್ಯವನ್ನು ಕೈಗೊಂಡಿರುವುದಿಲ್ಲ. |
| ಈ) | ರಾಜ್ಯದಲ್ಲಿ ಕಾಡುನಾಯಿ/ ಸೀಳುನಾಯಿ/ ಕೆನ್ನಾಯಿಗಳ ರಕ್ಷಣೆಗೆ ಇರುವ ಕಾನೂನುಗಳು ಯಾವುವು ಮತ್ತು ಅವುಗಳ ಅನುಷ್ಠಾನ ಯಾವ ಹಂತದಲ್ಲಿವೆ; (ಪೂರ್ಣ ಮಾಹಿತಿ ನೀಡುವುದು) | ಕಾಡುನಾಯಿ/ಸೀಳುನಾಯಿ ಕೆನ್ನಾಯಿಗಳನ್ನು ವನ್ಯಜೀವಿ (ಸಂರಕ್ಷಣಾ) ಅಧಿನಿಯಮ, 1972 ರ ಶೆಡ್ಯೂಲ್ 2 ರ ಭಾಗ-1 ರಲ್ಲಿ Asiatic Wild Dog or Dhole (Cuon Alpinus) ಎಂದು ನಿರ್ದಿಷ್ಟಪಡಿಸಲಾಗಿದ್ದು, ಸದರಿ ಪ್ರಾಣಿಗಳ ವಿರುದ್ಧ ಯಾವುದೇ ಕಾನೂನು ಬಾಹಿರ ಅಕ್ರಮ ಚಟುವಟಿಕೆಗಳು, ಕಂಡುಬಂದಲ್ಲಿ ವನ್ಯಜೀವಿ (ಸಂರಕ್ಷಣಾ) ಅಧಿನಿಯಮ, 1972 ರ ಅಡಿಯಲ್ಲಿ ಪ್ರಕರಣ ದಾಖಲಿಸಿ ಕಾನೂನು ಕ್ರಮ ಜರುಗಿಸಲಾಗುವುದು. |

ಸಂಖ್ಯೆ: ಅಪಜೀ 204 ಎಫ್‌ಡಬ್ಲ್ಯೂಎಲ್ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ